# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ

ಮಾನ್ಯ ಶ್ರೀ **ನೀಲಪ್ಪ ಈರಪ್ಪ ಹತ್ತಿ,** ಅಧ್ಯಕ್ಷರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ ಇವರ ಅಧ್ಯಕ್ಷತೆಯಲ್ಲಿ 12-01-2021 ರಂದು **ಮಂಗಳವಾರ 11-30 ಗಂಟೆಗೆ** ಜರುಗಿದ ಸಮಿತಿಯ ಸಾಮಾನ್ಯ ಸಭೆಯ ನಡುವಳಿಕೆಗಳು.

## ಸಭೆಗೆ ಹಾಜರಿದ್ದ ಸದಸ್ಯರು

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ನೀಲಪ್ಪ ಈರಪ್ಪ ಹತ್ತಿ | ಅಧ್ಯಕ್ಷರು |
| 2 | ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ | ಉಪಾಧ್ಯಕ್ಷರು |
| 3 | ಶ್ರೀ ಗುಡದಯ್ಯ ರಾಮಪ್ಪ ಕೊಪ್ಪದ | ಸದಸ್ಯರು |
| 4 | ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ | ,, |
| 5 | ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ | ,, |
| 6 | ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ | ,, |
| 7 | ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ | ,, |
| 8 | ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ | ,, |
| 9 | ಶ್ರೀ ರಾಜಶೇಖರಪ್ಪ ಮಹಾಲಿಂಗಪ್ಪ ಕರೆಣ್ಣವರ | ,, |
| 10 | ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ | ,, |
| 11 | ಶ್ರೀ ಓಂಪ್ರಕಾಶ ಪುಕರಾಜ ಜೈನ | ,, |
| 12 | ಶ್ರೀ ಪುಲಕೇಶಿ ಗೂಳಪ್ಪ ಉಪನಾಳ | ,, |
| 13 | ಶ್ರೀ ವೀರುಪಾಕ್ಷಪ್ಪ ಮಹದೇವಪ್ಪ ಮೇಟಿ | ನಾಮ ನಿರ್ದೇಶಿತ ಸದಸ್ಯರು |

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಕಾರ್ಯದರ್ಶಿಗಳು, ಕೃಉಮಾಸ, ಲಕ್ಷ್ಮೇಶ್ವರ | ಕಾರ್ಯದರ್ಶಿಯವರು |

## ಸಭೆಗೆ ಗೈರ ಹಾಜರಿದ್ದ ಅಧಿಕಾರಿಗಳು

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಮಾನ್ಯ ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಗದಗ. | ಇಲಾಖಾ ಪ್ರತಿನಿಧಿ |

## ಸಭೆಗೆ ಗೈರ ಹಾಜರಿದ್ದ ಸದಸ್ಯರು

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಸುರೇಶ ವೀರಭದ್ರಪ್ಪ ಬಳ್ಳಾರಿ | ಸದಸ್ಯರು |
| 2 | ಶ್ರೀಮತಿ ಸವಿತಾ ರಾಜಶೇಖರ ಭಾವಿಕಟ್ಟಿ | ನಾಮ ನಿರ್ದೇಶಿತ ಸದಸ್ಯರು |
| 3 | ಶ್ರೀ ಚಂದ್ರಶೇಖರ ಮಹದೇವಪ್ಪ ತಳವಾರ | ನಾಮ ನಿರ್ದೇಶಿತ ಸದಸ್ಯರು |

ವಿಷಯ ನಂ-1) ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವ ಕುರಿತು ವಿಚಾರ.

ಠರಾವ ನಂ-1) ದಿನಾಂಕ: 21-11-2020 ರಂದು ಜರುಗಿದ ಸಾಮಾನ್ಯ ಸಭೆಯ ನಡುವಳಿಕೆಗಳನ್ನು ಓದಲಾಯಿತು. ಅವೆಲ್ಲವು ಸರಿ ಇದ್ದುದರಿಂದ ಒಪ್ಪಿ ದೃಢೀಕರಿಸಲಾಯಿತು.

ಸೂಚಕರು: ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ
ಅನುಮೋದಕರು: ಶ್ರೀ ಗುಡದಯ್ಯ ರಾಮಪ್ಪ ಕೊಪ್ಪದ

ವಿಷಯ ನಂ-2) 2020-21 ನೇ ಸಾಲಿನ ನವ್ಹಂಬರ್ ಹಾಗೂ ಡಿಸೆಂಬರ ತಿಂಗಳ ಸಮಿತಿಯ ಆದಾಯ, ವೆಚ್ಚದ ಪತ್ರಿಕೆ ಪರಿಶೀಲಿಸಿ ಮಂಜೂರಾತಿ ನೀಡುವ ಕುರಿತು.

ಠರಾವ ನಂ-2) 2020-21 ನೇ ಸಾಲಿನ ನವ್ಹಂಬರ್ ಹಾಗೂ ಡಿಸೆಂಬರ ತಿಂಗಳ ಈ ಕೆಳಗಿನಂತಿರುವ ಆದಾಯ ಮತ್ತು ವೆಚ್ಚದ ತಃಖ್ತೆಯನ್ನು ಪರಿಶೀಲಿಸಿ ಒಪ್ಪಲಾಯಿತು.

**2020 ನೇ ಸಾಲಿನ ನವ್ಹಂಬರ್ ತಿಂಗಳಿನ ಆದಾಯ ವೆಚ್ಚದ ವಿವರಣಾತ್ಮಕ ತ:ಖ್ತೆ**

| ಕ್ರ. ಸಂ | ಆದಾಯ | ಮೊತ್ತ | ಕ್ರ. ಸಂ | ವೆಚ್ಚ | ಮೊತ್ತ |
|---|---|---|---|---|---|
| 1 | ಅ) ಮಾರುಕಟ್ಟೆ ಶುಲ್ಕ<br>ಬ) ಜಾನುವಾರು ಮಾ.ಶುಲ್ಕ | 696967-00<br>646-00 | 1 | ಭದ್ರತಾ ಸಿಬ್ಬಂದಿ ವೆಚ್ಚ (2020ಅಕ್ಟೋಬರ್ ತಿಂಗಳ) | 103994-00 |
| | **ಒಟ್ಟು ರೂ.** | **697613-00** | 2 | ಅಧ್ಯಕ್ಷರ/ಉಪಾಧ್ಯಕ್ಷರ ಗೌರವ ಧನ | 4500-00 |
| 2 | ಶುದ್ಧ ನೀರಿನ ಘಟಕ | 10920-00 | 3 | ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ | 8760-00 |
| 3 | ಲೀವ್ & ಲೈಸನ್ಸ್ ಫೀ | 18182-00 | 4 | ಕಛೇರಿ ನಿರ್ವಹಣೆ | 1600-00 |
| 4 | ಲೈಸನ್ಸ್ ಫೀ | 7000-00 | 5 | ಸದಸ್ಯರ ಸಭಾಭತ್ಯ ಪ್ರವಾಸಭತ್ಯ & ಸಿಟಿಂಗ್ ಫೀ | 8388-00 |
| 5 | ದಂಡ | 6882-00 | 6 | ಸಭೆಯ ವೆಚ್ಚ | 3210-00 |
| 6 | ಇತರೆ | 10000-00 | 7 | ಮುದ್ರಣ & ಲೇಖನ ಸಾಮಗ್ರಿ | 6395-00 |
| | | | 8 | ದೂರವಾಣಿ ವೆಚ್ಚ | 3890-00 |
| | | | 9 | ವಿದ್ಯುತ್ ವೆಚ್ಚ | 26587-00 |
| | **ಒಟ್ಟು ರೂ.** | **7,50,597-00** | | **ಒಟ್ಟು ರೂ.** | **1,67,324-00** |
| | **ಕೊರತೆ** | **--** | | **ಉಳಿತಾಯ** | **5,83,273-00** |
| | **ಅಂತೂ** | **7,50,597-00** | | **ಅಂತೂ** | **7,50,597-00** |

**2020 ನೇ ಸಾಲಿನ ಡಿಸೆಂಬರ್ ತಿಂಗಳಿನ ಆದಾಯ ವೆಚ್ಚದ ವಿವರಣಾತ್ಮಕ ತ:ಖ್ತೆ**

| ಕ್ರ. ಸಂ | ಆದಾಯ | ಮೊತ್ತ | ಕ್ರ. ಸಂ | ವೆಚ್ಚ | ಮೊತ್ತ |
|---|---|---|---|---|---|
| 1 | ಅ) ಮಾರುಕಟ್ಟೆ ಶುಲ್ಕ 0.35<br>ಬ) ಜಾನುವಾರು ಮಾ.ಶುಲ್ಕ | 697636-00<br>697-00 | 1 | ರಾಜ್ಯ ಸಂಚಿತ ನಿಧಿ ವಂತಿಕೆ (ಸಪ್ಟಂಬರ್ 2020) | 254330-00 |
| | **ಒಟ್ಟು ರೂ.** | **698333-00** | 2 | ಕೃಷಿ ಮಾರಾಟ ಮಂಡಳಿ ವಂತಿಕೆ (ಸಪ್ಟಂಬರ್2020 ರಿಂದ ನವ್ಹಂಬರ್2020 ತಿಂಗಳ) | 273134-00 |
| 2 | ಶುದ್ಧ ನೀರಿನ ಘಟಕ | 10080-00 | 3 | ಕೃಷಿ ವಿಶ್ವ ವಿದ್ಯಾಲಯ ವಂತಿಕೆ (ಸಪ್ಟಂಬರ್ 2020) | 16955-00 |
| 3 | ಲೀವ್ & ಲೈಸನ್ಸ್ ಫೀ | 11213-00 | 4 | ಆವರ್ತ ನಿಧಿ ವಂತಿಕೆ (ಸಪ್ಟಂಬರ್2020 ರಿಂದ ನವ್ಹಂಬರ್2020 ತಿಂಗಳ) | 1381586-00 |
| 4 | ದಂಡ | 435-00 | 5 | ಭದ್ರತಾ ಸಿಬ್ಬಂದಿ ವೆಚ್ಚ (2020 ನವ್ಹಂಬರ್ ತಿಂಗಳ) | 103994-00 |
| | | | 6 | ಅಧ್ಯಕ್ಷರ/ಉಪಾಧ್ಯಕ್ಷರ ಗೌರವ ಧನ | 4500-00 |
| | | | 7 | ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ | 13499-00 |
| | | | 8 | ಕಛೇರಿ ನಿರ್ವಹಣೆ | 550-00 |
| | | | 9 | ದಿನಪತ್ರಿಕೆ | 5700-00 |
| | | | 10 | ಅಂಚೆತಂತಿ ವೆಚ್ಚ | 1000-00 |
| | | | 11 | ಸಾದಿಲ್ವಾರ ವೆಚ್ಚ | 1782-52 |
| | | | 12 | ದೂರವಾಣಿ ವೆಚ್ಚ | 3891-00 |
| | | | 13 | ವಿದ್ಯುತ್ ವೆಚ್ಚ | 28038-00 |
| | | | 14 | ಜೀಪ ಇಂಧನ & ದುರಸ್ತಿ | 6022-00 |
| | **ಒಟ್ಟು ರೂ.** | **720061-00** | | **ಒಟ್ಟು ರೂ.** | **2094981-52** |
| | **ಕೊರತೆ** | **1374920-52** | | **ಉಳಿತಾಯ** | **--** |
| | **ಅಂತೂ** | **2094981-52** | | **ಅಂತೂ** | **2094981-52** |

ಸೂಚಕರು: ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ

ಅನುಮೋದಕರು: ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ

ವಿಷಯ ನಂ-3) ನಿಯಮ-71 ರಡಿ ಕೃಉಮಾಸ ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ 02 ಕಾಮಗಾರಿಗಳನ್ನು ಕೈಕೊಳ್ಳುವ ಬಗ್ಗೆ.

ಠರಾವ ನಂ-3) ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಮುಖ್ಯ ಕಾರ್ಯಾಲಯದ ಕಟ್ಟಡಕ್ಕೆ ಸುಧಾರಣೆ ಮಾಡುವುದು ಅವಶ್ಯಕವಾಗಿರುವುದನ್ನು ಮನಗಂಡು, ಈ ಕೆಳಗೆ ಕಾಣಿಸಿರುವ ಕಾಮಗಾರಿಗಳನ್ನು ಕೈಕೊಳ್ಳುವದು ಅವಶ್ಯಕವೆಂದು ಸಮಿತಿಯಲ್ಲಿ ಅವಲೋಕಿಸಲಾಯಿತು. 2020-21 ನೇ ಸಾಲಿನಲ್ಲಿ ನಿಯಮ 71 ರಡಿಯಲ್ಲಿ ಈ ಕೆಳಗಿನ 2 ಕಾಮಗಾರಿಗಳನ್ನು ಕೈಕೊಳ್ಳಲು ತಿರ್ಮಾನಿಸಲಾಯಿತು. ಹಾಗೂ ಈ ಕುರಿತು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ಗದಗ ಇವರಿಂದ ಅಂದಾಜು ಪತ್ರಿಕೆಯನ್ನು ತಯಾರಿಸಿ ನಿಯಮಾನುಸಾರ ಕಾಮಗಾರಿಯನ್ನು ಮಾಡಿಸಲು ನಿರ್ಣಯಿಸಲಾಯಿತು.

| ಅ. ನಂ | **ಕಾಮಗಾರಿ ಹೆಸರು** |
|---|---|
| 1 | ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೆಯ ಕಚೇರಿ ಕಟ್ಟಡದ ಮೇಲ್ಗಡೆ ಸಭಾ ಭವನ ಹಾಗೂ ಅಧ್ಯಕ್ಷರ, ಉಪಾಧ್ಯಕ್ಷರ ಕೊಠಡಿಗಳ ಮುಂದೆ ಮಳೆ ನೀರು ಬೀಳದಂತೆ ಪೋರ್ಚ್‌ನಲ್ಲಿ ಜಸ್ಸ್ (ತಗಡಿನ) ಶೀಟ್ ಅಳವಡಿಸುವ ಕಾಮಗಾರಿ ಭಾಗ-1 |
| 2 | ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೆಯ ಕಚೇರಿ ಕಟ್ಟಡದ ಮೇಲುಗಡೆ ಸಭಾ ಭವನ ಹಾಗೂ ಅಧ್ಯಕ್ಷರ ಉಪಾಧ್ಯಕ್ಷರ ಕೊಠಡಿಗಳ ಮುಂದೆ ಮಳೆ ನೀರು ಬೀಳದಂತೆ ಪೋರ್ಚ್‌ನಲ್ಲಿ ಜಸ್ಸ್ (ತಗಡಿನ) ಶೀಟ್ ಅಳವಡಿಸುವ ಕಾಮಗಾರಿ ಭಾಗ-2 |

ಸೂಚಕರು: ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ
ಅನುಮೋದಕರು: ಶ್ರೀ ರಾಜಶೇಖರಪ್ಪ ಮಹಾಲಿಂಗಪ್ಪ ಕರೆಣ್ಣವರ

ವಿಷಯ ನಂ-4) 2019-20 ನೇ ಸಾಲಿನ ವಾರ್ಷಿಕ ಲೆಕ್ಕ ತಪಾಸಣಾ ವರದಿಗೆ ಅನುಪಾಲನಾ ವರದಿ ಕಳುಹಿಸುವ ಬಗ್ಗೆ.

ಠರಾವ ನಂ-4) ಸಮಿತಿಯ 2019-20 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಮಾನ್ಯ ವಿಶೇಷ ಲೆಕ್ಕ ಪರಿಶೋಧಕರು, ಕೃಷಿ ಮಾರಾಟ ಇಲಾಖೆ, ಬೆಳಗಾವಿ ಇವರು ಕೈಗೊಂಡು, ಅವರ ಕಚೇರಿ ಪತ್ರ ಸಂಖ್ಯೆ/ಕೃಮಾಇ/ವಿಲೆಪ(ಬೆ)/271-74/2020-21, ದಿನಾಂಕ: 16-12-2020 ರ ಮೂಲಕ ಲೆಕ್ಕ ಪರಿಶೋಧನಾ ವರದಿಯನ್ನು ಬಿಡುಗಡೆಗೊಳಿಸಿರುತ್ತಾರೆ. ಸದರಿ ವರದಿಯಲ್ಲಿ ನಮೂದಿಸಿರುವ ನ್ಯೂನ್ಯತೆಗಳನ್ನು ಸರಿಪಡಿಸಿ ಅನುಪಾಲನಾ ವರದಿಯನ್ನು ಸಲ್ಲಿಸಲು ತಿಳಿಸಿರುವುದನ್ನು ಕಾರ್ಯದರ್ಶಿಯವರು ಸಭೆಗೆ ವಿವರಿಸಿ ಹೇಳಿದರು. ಸಭೆಯಲ್ಲಿ ಲೆಕ್ಕ ಪರಿಶೋಧನಾ ವರದಿಯನ್ನು ನಮೂದಿಸಿದ ಖಂಡಿಕೆಗಳ ಬಗ್ಗೆ ಪರಿಶೀಲಿಸಿ, ಸದರ ನ್ಯೂನ್ಯತೆಗಳನ್ನು ಸರಿಪಡಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆ ವಿವರಿಸಿ ಮಾನ್ಯ ವಿಶೇಷ ಲೆಕ್ಕ ಪರಿಶೋಧಕರು, ಬೆಳಗಾವಿ ಇವರಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ
ಅನುಮೋದಕರು: ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ

ವಿಷಯ ನಂ-5) ಸಮಿತಿಯ ಇ-ಟೆಂಡರ್ ವಿಭಾಗದ ಉಪಯೋಗಕ್ಕಾಗಿ 04 ಕಂಪ್ಯೂಟರ್‌ಗಳನ್ನು ಖರೀದಿಸುವ ಬಗ್ಗೆ.

ಠರಾವ ನಂ-5) ಸಮಿತಿಯ ಇ-ಟೆಂಡರ್ ವಿಭಾಗದ ಉಪಯೋಗಕ್ಕಾಗಿ 2016 ರಲ್ಲಿ ಖರೀದಿಸಿ ಅಳವಡಿಸಿರುವ ಗಣಕಯಂತ್ರಗಳು ಹಳೇಯದಾಗಿದ್ದು ಹಾಗೂ ದುರಸ್ತಿಗೆ ಬಂದಿದ್ದು, ಪ್ರಸ್ತುತ ಟೆಂಡರ್ ವಿಭಾಗದಲ್ಲಿ ಕಂಪ್ಯೂಟರ್‌ಗಳನ್ನು ಅಳವಡಿಸುವುದು ಅವಶ್ಯಕವಾಗಿರುವುನ್ನು ಮನಗಂಡು, ಸಧ್ಯಕ್ಕೆ 04 ಕಂಪ್ಯೂಟರ್‌ಗಳನ್ನು ಸಕ್ಷಮ ಪ್ರಾಧಿಕಾರಿಗಳಿಂದ ಬಜೆಟ್ ಮಂಜೂರಾತಿ ಪಡೆದುಕೊಂಡು ನಿಯಮಾನುಸಾರ ಖರೀದಿಸಿ ಅಳವಡಿಸಲು ಒಪ್ಪಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಓಂಪ್ರಕಾಶ ಮುಕರಾಜ ಜೈನ
ಅನುಮೋದಕರು: ಶ್ರೀ ಪುಲಕೇಶಿ ಗೂಳಪ್ಪ ಉಪನಾಳ

ವಿಷಯ ನಂ-6) ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು

ವಿಷಯ ನಂ-6(1) ಸಮಿತಿಯ ರೈತ ಭವನ ಕಟ್ಟಡವನ್ನು ನೂತನವಾಗಿ ರಚನೆಗೊಂಡ ಲಕ್ಷ್ಮೇಶ್ವರ ತಾಲೂಕಿನ ಮಾನ್ಯ ತಹಶೀಲ್ದಾರ ಕಾರ್ಯಾಲಯಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಗಳು ಗದಗ ಇವರು ಪಡೆದುಕೊಂಡಿದ್ದು, ಲೀವ್ & ಲೈಸನ್ಸ್ ತಳಹದಿಯ ಮೇಲೆ ಹಂಚಿಕೆ ಮಾಡುವ ಬಗ್ಗೆ

ಠರಾವ ನಂ-6(1) ಸಮಿತಿಯ ರೈತ ಭವನ ಕಟ್ಟಡವನ್ನು ನೂತನವಾಗಿ ರಚನೆಗೊಂಡ ಲಕ್ಷ್ಮೇಶ್ವರ ತಾಲೂಕಿನ ಮಾನ್ಯ ತಹಶೀಲ್ದಾರ ಕಾರ್ಯಾಲಯಕ್ಕಾಗಿ, ಮಾನ್ಯ ಜಿಲ್ಲಾಧಿಕಾರಿಗಳು ಗದಗ ಇವರು ದಿನಾಂಕ: 26-01-2018 ರಂದು ತಮ್ಮ ತಾಬಾಕ್ಕೆ ಪಡೆದುಕೊಂಡು ತಹಶೀಲ್ದಾರ ಕಾರ್ಯಾಲಯವನ್ನು ಉದ್ಘಾಟಿಸಿ, ಮಾನ್ಯ ತಹಶೀಲ್ದಾರವರ ಕಛೇರಿಯನ್ನು ಅನುಷ್ಠಾನಗೊಳಿಸಿ ಕಾರ್ಯಾರಂಭ ಮಾಡಿರುತ್ತಾರೆ. ಈ ಕುರಿತು ಸಮಿತಿಯಿಂದ ಮಾನ್ಯ ಜಿಲ್ಲಾಧಿಕಾರಿ ಇವರಿಗೆ ಸದರ ಕಟ್ಟಡವನ್ನು ಪಡೆದ ಬಗ್ಗೆ ಪತ್ರವನ್ನು ಸಲ್ಲಿಸಲು ಮತ್ತು ನಿಯಮಾನುಸಾರ ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರ ಇವರಿಂದ ಅನುಮತಿ ಪಡೆಯಬೇಕಾಗುವುದೆಂದು ತಿಳಿಯಪಡಿಸಲಾಗಿತ್ತು. ಆದರೆ ಇಲ್ಲಿಯವರೆಗೆ ಸದರಿಯವರಿಂದ ಕಟ್ಟಡ ಪಡೆದ ಬಗ್ಗೆ ಯಾವುದೇ ಪತ್ರವನ್ನು ಸಲ್ಲಿಸದೇ ಇರುವುದನ್ನು ಸಭೆಯಲ್ಲಿ ವಿವರಿಸಲಾಯಿತು.

ಲಕ್ಷ್ಮೇಶ್ವರ ತಾಲೂಕಿನ ತಹಶೀಲ್ದಾರ ಕಾರ್ಯಾಲಯ ಮತ್ತು ಇತರೆ ಇಲಾಖೆಗಳ ಕಟ್ಟಡ ನಿರ್ಮಾಣ ಮಾಡಲು ರೈತ ಭವನ ಕಟ್ಟಡ ಹಾಗೂ ಅದರ ಸುತ್ತಲೂ ಇರುವ ಖುಲ್ಲಾ ಜಾಗೆ 1 ಎಕರೆ 23 ಗುಂಟೆ ಜಾಗೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಗದಗ ಇವರಿಗೆ ಮಾರಾಟ ಮಾಡಲು ಸಮಿತಿಯ ಸಭೆ ದಿನಾಂಕ: 16-11-2018 ರಲ್ಲಿ ನಿರ್ಣಯಿಸಿ, ಮಂಜೂರಾತಿಗಾಗಿ ಮಾನ್ಯ ನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸಿರುವ ವಿಷಯವನ್ನು ಸಭೆಯಲ್ಲಿ ಅವಲೋಕಿಸಲಾಯಿತು. ಸದರಿ ರೈತ ಭವನ ಕಟ್ಟಡ ಮತ್ತು ಅದರ ಸುತ್ತಮುತ್ತಲಿನ ಜಾಗೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಗದಗ ಇವರು ಖರೀದಿ ನೀಡಲು ವಿನಂತಿಸಿದ್ದರ ಮೇರೆಗೆ, ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರ, ಇವರು ತಮ್ಮ ಪತ್ರ ಸಂಖ್ಯೆ/ಕೃಮಾಇ/ಅಭಿವಿ-03/ಲೀಕಂಸೇ/275/2018 ದಿನಾಂಕ: 08-02-2019 ರಲ್ಲಿ ಒಟ್ಟು ರೂ. 1,72,36,220-00 ಗಳ ಮೌಲ್ಯಕ್ಕೆ ಹಸ್ತಾಂತರಿಸಲು ಅನುಮತಿ ನೀಡಿರುವುದನ್ನು ಸಭೆಯಲ್ಲಿ ಅವಲೋಕಿಸಲಾಯಿತು. ಈ ಕುರಿತು ಇಲ್ಲಿಯವರೆಗೆ ಮಾನ್ಯ ಜಿಲ್ಲಾಧಿಕಾರಿಗಳು ಗದಗ ಇವರು ಸಮಿತಿಗೆ ಹಣ ಸಂದಾಯಿಸಿರುವುದಿಲ್ಲ ಹಾಗೂ ಖರೀದಿ ಪ್ರಕ್ರೀಯೆಯನ್ನು ಜರುಗಿಸಲು ಯಾವುದೇ ಕ್ರಮವಹಿಸಿರುವುದಿಲ್ಲವೆಂದು ಸಭೆಯಲ್ಲಿ ಕಾರ್ಯದರ್ಶಿಯವರು ವಿವರಿಸಿದರು.

ಸಮಿತಿಯಿಂದ ಕಟ್ಟಡವನ್ನು ಲೀವ್ & ಲೈಸನ್ಸ್ ಫೀ ತಳಹದಿಯ ಮೇಲೆ ಹಂಚಿಕೆ ಪಡೆಯಲು ಅನೇಕ ಬಾರಿ ಪತ್ರ ವ್ಯವಹಾರ ಮಾಡಿ ಸದರಿ ಕಟ್ಟಡಕ್ಕೆ ಪಿ.ಡಬ್ಲ್ಯೂ.ಡಿ. ಇವರಿಂದ ಬಾಡಿಗೆ ನಿಗಧಿಪಡಿಸಲು ವಿನಂತಿಸಲಾಗಿತ್ತು. ಮುಂದುವರೆದು ಮಾನ್ಯ ತಹಶೀಲ್ದಾರ ಲಕ್ಷ್ಮೇಶ್ವರ ಇವರು ತಮ್ಮ ಪತ್ರ ದಿನಾಂಕ: 09-02-2018 ರಲ್ಲಿ ಸದರಿ ಕಟ್ಟಡದ ಬಾಡಿಗೆಯನ್ನು ಪಿ.ಡಬ್ಲ್ಯೂ.ಡಿ. ಇಲಾಖೆಯಿಂದ ನಿಗಧಿಪಡಿಸಿಕೊಂಡು ಬಾಡಿಗೆಯನ್ನು ಸಂದಾಯಿಸಲು ಕ್ರಮವಹಿಸುವುದಾಗಿ ಸೂಚಿಸಿದ್ದರು, ಆದರೆ ಸದರಿ ಕಟ್ಟಡದ ಬಾಡಿಗೆಯನ್ನು ಇಲ್ಲಿಯವರೆಗೂ ನಿಗಧಿಪಡಿಸದೇ ಇರುವುದನ್ನು ಸಮಿತಿಯ ಗಮನಕ್ಕೆ ತರಲಾಯಿತು.

ರೈತ ಭವನ ಕಟ್ಟಡಕ್ಕೆ ಇಲ್ಲಿಯವರೆಗೆ ಪಿ.ಡಬ್ಲ್ಯೂ.ಡಿ. ಇಲಾಖೆ ಇವರಿಂದ ಬಾಡಿಗೆ ನಿಗಧಿಯಾಗದೇ ವಿಳಂಬವಾಗಿದ್ದರಿಂದ, ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮಾಅಯೋ ಗದಗ, ಇವರಿಂದ ಸದರಿ ಕಟ್ಟಡಕ್ಕೆ ನಿಗಧಿಪಡಿಸಿದ ಹಾಗೂ ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರ ಇವರಿಂದ ಮಂಜೂರಾತಿ ಪಡೆದ ರೈತ ಭವನ ಕಟ್ಟಡದ ನಿಗಧಿತ ಬಾಡಿಗೆ ರೂ. 16075-00 ರಂತೆ ಸಮಿತಿಗೆ ಸಂಧಾಯಿಸಲು ಮಾನ್ಯ ಜಿಲ್ಲಾಧಿಕಾರಿಗಳು ಗದಗ ಇವರಿಗೆ ವಿನಂತಿಸಿಕೊಂಡ ಮೇರೆಗೆ, ಮಾನ್ಯ ಜಿಲ್ಲಾಧಿಕಾರಿಗಳು ಗದಗ ಇವರು ಪತ್ರ ಸಂಖ್ಯೆ/ಅಡ್ಮಿನ್-19/22/89/2020 ದಿನಾಂಕ: 19-11-2020 ರಲ್ಲಿ ಮಾನ್ಯ ತಹಶೀಲ್ದಾರ ಲಕ್ಷ್ಮೇಶ್ವರ ಇವರಿಗೆ ಮಾಸಿಕ ರೂ. 16075-00 ರಂತೆ ಬಾಡಿಗೆಯನ್ನು ಸಂದಾಯಿಸಲು ಆದೇಶಿಸಿರುವುದನ್ನು ಕಾರ್ಯದರ್ಶಿಯವರು ಸಭೆಯಲ್ಲಿ ವಿವರಿಸಿದರು.

ಮೇಲಿನ ಎಲ್ಲ ಅಂಶಗಳನ್ನು ಸಭೆಯಲ್ಲಿ ಅವಲೋಕಿಸಲಾಯಿತು. ಸಮಿತಿಯ ರೈತ ಭವನ ಕಟ್ಟಡವನ್ನು ನೂತನವಾಗಿ ರಚನೆಗೊಂಡ ಮಾನ್ಯ ತಹಶೀಲ್ದಾರ ಕಾರ್ಯಾಲಯ ಲಕ್ಷ್ಮೇಶ್ವರ ಇವರಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳು ಗದಗ ಇವರು ದಿನಾಂಕ: 26-01-2018 ರಂದು ತಮ್ಮ ತಾಬಾಕ್ಕೆ ಪಡೆದುಕೊಂಡಿದ್ದು, ಪ್ರಸ್ತುತ ಮಾನ್ಯ ಜಿಲ್ಲಾಧಿಕಾರಿ ಗದಗ, ಇವರು ಸದರಿ ಕಟ್ಟಡಕ್ಕೆ ಮಾಸಿಕ ರೂ. 16075-00 ರಂತೆ ಸಮಿತಿಗೆ ಸಂದಾಯಿಸಲು ಒಪ್ಪಿಕೊಂಡಿರುವುದನ್ನು ಅವಲೋಕಿಸಿ, ಸದರಿ ಕಟ್ಟಡವನ್ನು ಮಾನ್ಯ ತಹಶೀಲ್ದಾರ ಕಾರ್ಯಾಲಯ ಲಕ್ಷ್ಮೇಶ್ವರ ಇವರಿಗೆ ಮಾಸಿಕ ರೂ. 16075-00 ರಂತೆ ಲೀವ್ & ಲೈಸನ್ಸ್ ಫೀ ತಳಹದಿಯ ಮೇಲೆ ಹಂಚಿಕೆ ಮಾಡಿರುವುದಕ್ಕೆ ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರ, ಇವರಿಂದ ದಯಾಪರ ಮಂಜೂರಾತಿ ಪಡೆಯಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ
ಅನುಮೋದಕರು: ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ

ಸಹಿ/-
ಕಾರ್ಯದರ್ಶಿ
ಕೃ.ಉ.ಮಾ.ಸ.,ಲಕ್ಷ್ಮೇಶ್ವರ

ಸಹಿ/-
ಅಧ್ಯಕ್ಷರು
ಕೃ.ಉ.ಮಾ.ಸ.,ಲಕ್ಷ್ಮೇಶ್ವರ

'ನಕಲು ಪ್ರತಿ'

ಕಾರ್ಯದರ್ಶಿ
ಕೃ.ಉ.ಮಾ.ಸ ಲಕ್ಷ್ಮೇಶ್ವರ